## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ವಿಭಾಗ ಹಾಗೂ ಯೋಜನಾ ಉಪ ವಿಭಾಗ - ಕಚೇರಿಗಳು ಮತ್ತು ಅಧಿಕಾರಿ / ಸಿಬ್ಬಂದಿ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ – ಆದೇಶ.

**ಓದಲಾಗಿದೆ:-**

1. ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 77 ಜಿಪಅ 2008, ದಿನಾಂಕ. 04-09-2008
2. ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 62 ಜಿಪಅ 2009 ದಿನಾಂಕ 10-06-2009
3. ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 367 ಜಿಪಅ 2012 ದಿನಾಂಕ 10-10-2012
4. ಸರ್ಕಾರಿ ಆದೇಶ ಸಂಖ್ಯೆ ಗ್ರಾಅಪ 221 ಜಿಪಅ 2012 ದಿನಾಂಕ 23-08-2012
5. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ. ಕೆಆರ್‌ಆರ್‌ಡಿಎ /ಸಿ-1/2013/446, ದಿನಾಂಕ. 16-05-2013

*****

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಸಂಸ್ಥೆಯ ವತಿಯಿಂದ ಕರ್ನಾಟಕ ರಾಜ್ಯದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ, ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ನಿಗದಿತ ಕಾಲಾವಧಿಯೊಳಗೆ ವ್ಯವಸ್ಥಿತವಾಗಿ ಹಾಗೂ ಪರಿಣಾಮಕಾರಿಯಾಗಿ ಪೂರ್ಣಗೊಳಿಸುವ ಉದ್ದೇಶದಿಂದ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 04-09--2008ರ ಸರ್ಕಾರಿ ಆದೇಶದಲ್ಲಿ 19 ಯೋಜನಾ ವಿಭಾಗಗಳನ್ನು ಹಾಗೂ 32 ಯೋಜನಾ ಉಪ ವಿಭಾಗಗಳನ್ನು ತಾತ್ಕಲಿಕವಾಗಿ ಸೃಜಿಸಲಾಗಿದ್ದು, ಕಾಲಕಾಲಕ್ಕೆ ಮುಂದುವರೆಸಿಕೊಂಡು ಬಂದಿದ್ದು, ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 10-10-2012ರ ಆದೇಶದಲ್ಲಿ ಮುಂದುವರೆಸಿದ ಸದರಿ 19 ಯೋಜನಾ ವಿಭಾಗಗಳ ಹಾಗೂ 32 ಉಪ ವಿಭಾಗಗಳ ಅವಧಿಯು ದಿನಾಂಕ 31-08-2013ಕ್ಕೆ ಮುಕ್ತಾಯಗೊಳ್ಳಲಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 10-06-2009ರ ಮತ್ತೊಂದು ಆದೇಶದಲ್ಲಿ 10 ಯೋಜನಾ ವಿಭಾಗಗಳನ್ನು ಹಾಗೂ 18 ಯೋಜನಾ ಉಪ ವಿಭಾಗಗಳನ್ನು ತಾತ್ಕಲಿಕವಾಗಿ ಸೃಜಿಸಲಾಗಿದ್ದು, ಕಾಲಕಾಲಕ್ಕೆ ಮುಂದುವರೆಸಿಕೊಂಡು ಬಂದಿದ್ದು, ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ 23-08-2012ರ ಆದೇಶದಲ್ಲಿ ಮುಂದುವರೆಸಿದ ಸದರಿ 10 ಯೋಜನಾ ವಿಭಾಗಗಳ ಹಾಗೂ 18 ಯೋಜನಾ ಉಪ ವಿಭಾಗಗಳ ಅವಧಿಯು ದಿನಾಂಕ 9-6-2013ಕ್ಕೆ ಮುಕ್ತಾಯಗೊಂಡಿರುತ್ತದೆ.

ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ 16-05-2013ರ ಪತ್ರದಲ್ಲಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ವತಿಯಿಂದ ಕರ್ನಾಟಕ ರಾಜ್ಯದಲ್ಲಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾಗಿದ್ದು, ಈ ಯೋಜನೆಯಡಿ ಹಂತ 1 ರಿಂದ 10 ರವರೆಗೆ ಒಟ್ಟು 3251 ರಸ್ತೆಗಳ 16270.63 ಕಿ.ಮೀ ಉದ್ದವನ್ನು ಅಭಿವೃದ್ಧಿ ಪಡಿಸಲು ರೂ. 3292.07 ಕೋಟಿಗಳಿಗೆ ಅನುಮೋದನೆ

---2

ಪಡೆದಿದ್ದು, ಮಾರ್ಚ್ 2013ರ ಅಂತ್ಯಕ್ಕೆ 3196 ಕಾಮಗಾರಿಗಳ ಒಟ್ಟು ಉದ್ದ 15926.81 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿಪಡಿಸಿ ರೂ. 3601.80 ಕೋಟಿಗಳ ವೆಚ್ಚ ಮಾಡಲಾಗಿದ್ದು, ಉಳಿದ 343.25 ಕಿ.ಮೀ. ಉದ್ದದ ರಸ್ತೆಯನ್ನು 2013-14ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ (CMRRF) ರಾಜ್ಯ ಸರ್ಕಾರದ ಪುರಸ್ಕೃತ ಯೋಜನೆಯಾಗಿದ್ದು, ಈ ಯೋಜನೆಯಡಿ ಹಂತ-1 ಮತ್ತು ಹಂತ-2ರ ವರೆಗೆ ಒಟ್ಟು 9442.79 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿಪಡಿಸಲು ರೂ. 3479.86 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲಾಗಿದ್ದು, ಮಾರ್ಚ್ 2013ರ ಅಂತ್ಯಕ್ಕೆ 3213.09 ಕಿ.ಮೀ. ಉದ್ದದ ರಸ್ತೆಯನ್ನು ರೂ. 985.65 ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದೆ ಹಾಗೂ ಉಳಿದ ಸುಮಾರು 6229.70 ಕಿ.ಮೀ. ರಸ್ತೆಯ ಅಭಿವೃದ್ಧಿ ಕಾರ್ಯ ಪೂರ್ಣ ಪ್ರಮಾಣದಲ್ಲಿ ಪ್ರಗತಿಯಲ್ಲಿದೆ.

ಮುಂದುವರೆದು, PMGSY ಕಾಮಗಾರಿಗಳ ಬಾಕಿ ಉದ್ದ 343.25 ಕಿ.ಮೀ. ಹಾಗೂ ನಮ್ಮ ಗ್ರಾಮ ನಮ್ಮ ರಸ್ತೆ ಕಾಮಗಾರಿಗಳ 2800.00 ಕಿ.ಮೀ. ಸೇರಿದಂತೆ ಒಟ್ಟು 3143.25 ಕಿ.ಮೀ. ರಸ್ತೆಯನ್ನು 2013-14ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. ಅಲ್ಲದೆ ಅನುಮೋದನೆಯಾಗಿರುವ Jute and Coir tech works, Missing CDs ಮತ್ತು ಹಂತ-XI ರಡಿಯಲ್ಲಿ ಸುಮಾರು 1850 ಕಿ.ಮೀ. ಹಾಗೂ CMRRF ಅಡಿಯಲ್ಲಿ ಹಂತ-II ರ 3429.77 ಕಿ.ಮೀ. ಡಿಪಿಆರ್ ತಯಾರಿಕೆ ಇದ್ದು, ಇವುಗಳೆಲ್ಲವನ್ನು ನಿರ್ವಹಿಸಲು ಈಗಿರುವ ಯೋಜನಾ ವಿಭಾಗ ಹಾಗೂ ಯೋಜನಾ ಉಪ ವಿಭಾಗಗಳನ್ನು ಮುಂದುವರೆಸುವುದು ಅವಶ್ಯಕವಿರುತ್ತದೆಂದು ವರದಿ ಮಾಡುತ್ತಾ ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 77 ಜಿಪಅ 2008, ದಿನಾಂಕ. 4-9-2008ರಲ್ಲಿ ಸೃಜಿಸಲಾಗಿರುವ 19 ಯೋಜನಾವಿಭಾಗಗಳು ಹಾಗೂ 32 ಯೋಜನಾ ಉಪ ವಿಭಾಗಗಳನ್ನು ಮತ್ತು ಇವುಗಳಿಗೆ ಹೊಂದಿಕೊಂಡಿರುವಂತೆ ವಿವಿಧ ವೃಂದದ ಅಧಿಕಾರಿ / ಸಿಬ್ಬಂದಿ ಹುದ್ದೆಗಳ ಅವಧಿಯು 31-08-2013ಕ್ಕೆ ಮುಗಿಯಲಿದ್ದು ಹಾಗೂ 10 ಯೋಜನಾ ವಿಭಾಗಗಳು ಮತ್ತು 18 ಯೋಜನಾ ಉಪ ವಿಭಾಗಗಳ ಅವಧಿಯು ದಿನಾಂಕ 09-06-2013ಕ್ಕೆ ಮುಗಿಯುಲಿದೆ. ಸರ್ಕಾರದ ದಿನಾಂಕ 4-9-2008 ಮತ್ತು 10-06-2009ರ ಎರಡೂ ಆದೇಶಗಳಲ್ಲಿ ಸೃಜಿಸಲಾದ ಆಡಳಿತ ವ್ಯವಸ್ಥೆಯನ್ನು ಒಟ್ಟುಗೂಡಿಸಿ ಒಂದೇ ದಿನಾಂಕವನ್ನು ನಿಗದಿಗೊಳಿಸಲು ಹಾಗೂ ದಿನಾಂಕ 10-06-2013 ರಿಂದ 09-06-2016 ರವರೆಗೆ ಮುಂದುವರೆಸಲು ಸರ್ಕಾರದ ಅನುಮೋದನೆ ನೀಡುವಂತೆ ಕೋರಿದ್ದಾರೆ.

ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಕಾಮಗಾರಿಗಳ ನಿರ್ವಹಣೆಗಾಗಿ ಮೇಲ್ಕಂಡ ಕಚೇರಿಗಳನ್ನು ಹಾಗೂ ಅದಕ್ಕೆ ಹೊಂದಿಕೊಂಡಿರುವ ಅಧಿಕಾರಿ / ಸಿಬ್ಬಂದಿ ಹುದ್ದೆಗಳನ್ನು ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಲು ಸರ್ಕಾರವು ನಿರ್ಧರಿಸಿ, ಈ ಮುಂದಿನಂತೆ ಆದೇಶಿಸಿದೆ.

<u>ಆದೇಶ ಸಂಖ್ಯೆ. ಗ್ರಾಅಪ 174 ಜಿಪಅ 2013, ಬೆಂಗಳೂರು, ದಿನಾಂಕ 08-07-2013</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 77 ಜಿಪಅ 2008, ದಿನಾಂಕ. 4-9-2008ರಲ್ಲಿ ಸೃಜಿಸಲಾಗಿರುವ 19 ಯೋಜನಾ ವಿಭಾಗಗಳನ್ನು ಹಾಗೂ 32 ಯೋಜನಾ ಉಪ ವಿಭಾಗಗಳನ್ನು ಹಾಗೂ ಇವುಗಳಿಗೆ ಹೊಂದಿಕೊಂಡಿರುವ ಹುದ್ದೆಗಳನ್ನು ದಿನಾಂಕ. 1-9-2013 ರಿಂದ 31-08-2014 ರವರೆಗೆ ಮತ್ತು

---3

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 62 ಜಿಪಅ 2009 ದಿನಾಂಕ 10-06-2009ರಲ್ಲಿ ಸೃಜಿಸಲಾಗಿರುವ 10 ಯೋಜನಾ ವಿಭಾಗಗಳನ್ನು ಹಾಗೂ 18 ಯೋಜನಾ ಉಪ ವಿಭಾಗಗಳನ್ನು ಹಾಗೂ ಇವುಗಳಿಗೆ ಹೊಂದಿಕೊಂಡಿರುವ ಹುದ್ದೆಗಳನ್ನು ದಿನಾಂಕ. 10-06-2013 ರಿಂದ 09-06-2014 ರವರೆಗೆ ಮುಂದುವರೆಸಿದೆ.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ. ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ. 10-07-1996ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಲೆಕ್ಕ ಪತ್ರ 1 & 2) / (ಆಡಿಟ್)
2. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ
3. ಎಲ್ಲಾ ಪ್ರಧಾನ ಇಂಜಿನಿಯರ್‌ಗಳು / ಮುಖ್ಯ ಇಂಜಿನಿಯರ್‌ಗಳು / ಲೋಕೋಪಯೋಗಿ ಇಲಾಖೆ / ಜಲಸಂಪನ್ಮೂಲ ಇಲಾಖೆ/ ಸಣ್ಣ ನೀರಾವರಿ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ರಿಸಾಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು,
5. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ರಾಜಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
7. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
8. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
9. ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಗ್ರಾ.ಅ.ಪಂ.ಇಲಾಖೆ.
10. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ
11. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ, ಬಿ & ಸಿ)
12. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಎಲ್ಲಾ ವೃತ್ತಗಳ ಅಧೀಕ್ಷಕ ಇಂಜಿನಿಯರ್‌ಗಳಿಗೆ / ಎಲ್ಲಾ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ.
13. ಎಲ್ಲಾ ಯೋಜನಾ ವಿಭಾಗಗಳ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ
14. ಎಲ್ಲಾ ಯೋಜನಾ ಉಪ ವಿಭಾಗಗಳ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಿಗೆ.
15. ಗ್ರಾ.ಅ.ಪಂ.ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್)/ ಅಪರ ಕಾರ್ಯದರ್ಶಿ (ಆಡಳಿತ) / ಉಪ ಕಾರ್ಯದರ್ಶಿ (ಆಡಳಿತ-2) ಇವರುಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರಿಗೆ.
16. ಮೇಲ್ವಿಚಾರಕರು, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
17. ರಕ್ಷಾ ಕಡತ / ಕಂಪ್ಯೂಟರ್ ಸೆಲ್ / ಹೆಚ್ಚುವರಿ ಪ್ರತಿಗಳು.